# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1259 |
| ಮಾನ್ಯ ಸದಸ್ಯರ ಹೆಸರು | ಶ್ರೀ.ಶಿವಕುಮಾರ್. ಕೆ (ನಾಮನಿರ್ದೇಶಕರು) |
| ಉತ್ತರಿಸುವವರು | ಮಾನ್ಯ ಮಹಿಳಾ ಮತ್ತು ಮಕ್ಕಳಾಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯನಾಗರೀಕರ ಸಬಲೀಕರಣ ಸಚಿವರು. |
| ಉತ್ತರಿಸಬೇಕಾದ ದಿನಾಂಕ | 13-03-2026 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಪ್ರಸ್ತುತ ಗುರುತಿಸಲಾಗಿರುವ ತೃತೀಯ ಲಿಂಗಿಗಳ ಒಟ್ಟು ಸಂಖ್ಯೆ ಎಷ್ಟು; ಅವರಲ್ಲಿ ಎಷ್ಟು ಜನರಿಗೆ' ಮೈತ್ರಿ' ಮಾಸಾಶನ ಯೋಜನೆ ತಲುಪುತ್ತಿದೆ; (ಜಿಲ್ಲಾವಾರು ವಿವರ ನೀಡುವುದು). | ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ 2025-26 ಸಾಲಿನಲ್ಲಿ ತೃತೀಯ ಲಿಂಗಿಗಳ ಸಮೀಕ್ಷೆಯನ್ನು ನಡೆಸಲಾಗಿದ್ದು, ರಾಜ್ಯದಲ್ಲಿ ಒಟ್ಟು **10365** ತೃತೀಯ ಲಿಂಗಿಗಳು ಸಮೀಕ್ಷೆಯಲ್ಲಿ ಗುರುತಿಸಿಕೊಂಡಿರುತ್ತಾರೆ.<br><br>**ಕಂದಾಯ ಇಲಾಖೆ** ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ 95 ಡಿಎಸ್‌ಪಿ 2013 ದಿನಾಂಕ:01.08.2013ರಂತೆ ಮೈತ್ರಿ ಯೋಜನೆಯಡಿ ಮಾಸಾಶನ ಪಾವತಿಸಲಾಗುತ್ತಿದ್ದು, ಜನವರಿ 2026ರ ಮಾಹೆಯ ಅಂತ್ಯದವರೆಗೆ ಒಟ್ಟು 2734 ಫಲಾನುಭವಿಗಳಿಗೆ ಮಾಸಾಶನ ಪಾವತಿಲಾಗಿರುತ್ತದೆ, ಆದೇಶದ ಪ್ರತಿಯನ್ನು **ಅನುಬಂಧ-1** ಹಾಗೂ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-2** ರಲ್ಲಿ ಒದಗಿಸಿದೆ. |
| ಆ | ತೃತೀಯ ಲಿಂಗಿಗಳು ಘನತೆಯಿಂದ ಬದುಕಲು ಮತ್ತು ಅವರು ಭಿಕ್ಷಾಟನೆಯಲ್ಲಿ ತೊಡುಗುವುದನ್ನು ತಪ್ಪಿಸಲು ಸರ್ಕಾರ ಹಮ್ಮಿಕೊಂಡಿರುವ ಕೌಶಲ್ಯಾಭಿವೃದ್ಧಿ ಮತ್ತು ಸ್ವಯಂ ಉದ್ಯೋಗ ಯೋಜನೆಗಳು ಯಾವುವು; | ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ತೃತೀಯ ಲಿಂಗಿಗಳ ಸ್ವಯಂ ಉದ್ಯೋಗಕ್ಕಾಗಿ**"ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ"** ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಆರ್ಥಿಕ ಸೌಲಭ್ಯವಾಗಿ ತಲಾ ರೂ. 30,000/- ಗಳನ್ನು ಪ್ರೋತ್ಸಾಹಧನದ ರೂಪದಲ್ಲಿ ನೀಡಲಾಗುತ್ತಿದೆ.<br><br>**ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ**<br>**<u>ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ-(ಕೆ.ಎಸ್.ಡಿ.ಸಿ)</u>**<br><br>ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದಿಂದ ತೃತೀಯ ಲಿಂಗಿಗಳು ಘನತೆಯಿಂದ ಬದುಕಲು ಮತ್ತು ಅವರು ಭಿಕ್ಷಾಟನೆಯಲ್ಲಿ ತೊಡಗುವುದನ್ನು ತಪ್ಪಿಸಲು ಯಾವುದೇ ಪ್ರತ್ಯೇಕ ಯೋಜನೆ/ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುವುದಿಲ್ಲ. ಆದಾಗ್ಯೂ ಸರ್ಕಾರದ ಮಹಾತ್ವಕಾಂಕ್ಷಿ ಯೋಜನೆಯಾದ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ ತೃತೀಯಲಿಂಗಿಗಳು ಸಹ ನೋಂದಣಿಗೊಂಡು ಉಚಿತ ಕೌಶಲ್ಯಾಧಾರಿತ ತರಬೇತಿಯನ್ನು ಪಡೆದು, ಸ್ವಯಂ ಉದ್ಯೋಗವನ್ನು ಕೈಗೊಳ್ಳಬಹುದಾಗಿರುತ್ತದೆ.<br><br>**<u>ರಾಷ್ಟ್ರೀಯ ಜೀವನೋಪಾಯ ಅಭಿಯಾನ</u>**<br><br>**<u>ದೀನ್ ದಯಾಳ್ ಅಂತ್ಯೋದಯ ನಗರ ಜೀವನೋಪಾಯ ಅಭಿಯಾನ</u>**<br><u>(DAY-NULM)</u><br><br>• ಡೇ-ಎನ್‌ಯುಎಲ್‌ಎಂ ಯೋಜನೆಯು ದಿನಾಂಕ: 30.09.2024ರ ಅಂತ್ಯಕ್ಕೆ ಮುಕ್ತಾಯಗೊಂಡಿರುತ್ತದೆ. ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಮಂತ್ರಾಲಯ ರವರ ಪತ್ರ ಸಂಖ್ಯೆ: K-11013(8) /1/2021-UPA-I-UD-Part(1)/E-9126071 ದಿನಾಂಕ:04.12.2024 ರನ್ವಯ ಹೊಸ ಯೋಜನೆಯಾದ ದೀನದಯಾಳ್ ಜನ್ ಆಜೀವಿಕ (ಶಹರಿ) ಯೋಜನೆಯನ್ನು (DJAY-S) ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಲು ಅನುಮೋದನೆಯನ್ನು ನೀಡಿರುತ್ತದೆ. ಸದರಿ ಯೋಜನೆಯನ್ನು ದಿನಾಂಕ:30.09.2025 ರವರೆಗೆ ಮುಂದುವರೆಸಲಾಗಿರುತ್ತದೆ. ಅದರಂತೆ ಕೇಂದ್ರ ಸರ್ಕಾರದಿಂದ ಕರಡು ಮಾರ್ಗಸೂಚಿಯು ಮಾತ್ರ |

ಸ್ವೀಕೃತವಾಗಿದ್ದು, ಅನುದಾನ ಮತ್ತು ಭೌತಿಕ ಗುರಿ ಸ್ವೀಕೃತವಾಗಿರುವುದಿಲ್ಲ.

- ಕೇಂದ್ರ ಪುರಸ್ಕೃತ ಯೋಜನೆಯಾದ ಪ್ರಧಾನ ಮಂತ್ರಿ ಬೀದಿ ಬದಿ ವ್ಯಾಪಾರಿಗಳ ಆತ್ಮ ನಿರ್ಭರ್ ನಿಧಿ ಯೋಜನೆಯಡಿ ಎಲ್ಲಾ ವರ್ಗದ ಅರ್ಹ ಬೀದಿ ಬದಿ ವ್ಯಾಪಾರಿಗಳಿಗೆ ಮೊದಲನೇ ಹಂತದಲ್ಲಿ ರೂ.15000/- ಎರಡನೇ ಹಂತದಲ್ಲಿ ರೂ.25000/- ಮತ್ತು ಮೂರನೇ ಹಂತದಲ್ಲಿ ರೂ. 50000/- ಗಳವರೆಗೆ ಶೇ. 7 ರಷ್ಟು ಬಡ್ಡಿ ಸಹಾಯಧನದೊಂದಿಗೆ ಕಿರು ಸಾಲ ಸೌಲಭ್ಯವನ್ನು ಒದಗಿಸಲಾಗುತ್ತಿದೆ.
- ದೀನದಯಾಳ್ ಜನ್ ಆಜೀವಿಕ ಯೋಜನೆ-ಶಹರಿ (ಪ್ರಾಯೋಗಿಕ) ರಡಿ ನಗರದ ಬೀದಿ ಬದಿ ವ್ಯಾಪಾರಿಗಳಿಗೆ ಬೆಂಬಲ ಉಪಘಟಕದಡಿ ಗುರುತಿಸಲ್ಪಟ್ಟ ಎಲ್ಲಾ ವರ್ಗದ ಅರ್ಹ ಬೀದಿ ಬದಿ ವ್ಯಾಪಾರಿಗಳಿಗೆ ಗುರುತಿನ ಚೀಟಿ ಮತ್ತು ಮಾರಾಟ ಪ್ರಮಾಣ ಪತ್ರವನ್ನು ವಿತರಿಸಲಾಗುವುದು.

**<u>ಸಂಜೀವಿನಿ- ಕೆ ಎಸ್ ಆರ್ ಎಲ್ ಪಿ ಎಸ್ ಸಂಸ್ಥೆ/</u>**
**<u>ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ</u>** <u>(DAY-NRLM)</u>

ತೃತೀಯ ಲಿಂಗಿಗಳು ಘನತೆಯಿಂದ ಬದುಕಲು ಮತ್ತು ಅವರು ಭಿಕ್ಷಾಟಣೆಯಲ್ಲಿ ತೊಡಗುವುದನ್ನು ತಪ್ಪಿಸಲು ಸಂಜೀವಿನಿ-ಕೆ.ಎಸ್.ಆರ್ .ಎಲ್.ಪಿ.ಎಸ್ ಸಂಸ್ಥೆಯ ಮೂಲಕ ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಕೇಂದ್ರಗಳು (Rural Self Employment Training Institutes-RSETI) ಯೋಜನೆಯನ್ನು ಜಿಲ್ಲಾ ಲೀಡ್ ಬ್ಯಾಂಕ್ ಮುಖಾಂತರ ರಾಜ್ಯಾದ್ಯಂತ ಅನುಷ್ಠಾನಗೊಳಿಸಲಾಗುತ್ತಿದೆ. ವಿವರಗಳು ಈ ಕೆಳಗಿನಂತಿದೆ.

| ಕ್ರ. ಸಂ | ವರ್ಷ | ತೃತೀಯ ಲಿಂಗಿಗಳ ವಿವರ | |
|---|---|---|---|
| | | ತರಬೇತಿ ಹೊಂದಿರುವ ಅಭ್ಯರ್ಥಿಗಳ ಸಂಖ್ಯೆ | ಸ್ವ-ಉದ್ಯೋಗ ಹೊಂದಿರುವ ಅಭ್ಯರ್ಥಿಗಳ ಸಂಖ್ಯೆ |
| 1 | 2022-23 | 522 | 379 |
| 2 | 2023-24 | 39 | 189 |
| 3 | 2024-25 | 20 | 115 |
| 4 | 2025-26 (31.01.2026 ರವರೆಗೆ) | 7 | 12 |

ಇ

ರಾಜ್ಯದ ವಿವಿಧ ನಿರಾಶ್ರಿತರ ಪರಿಹಾರ ಕೇಂದ್ರಗಳಲ್ಲಿ (Beggar Relief Centers) ಇರುವ ಭಿಕ್ಷುಕರ ಒಟ್ಟು ಸಂಖ್ಯೆ ಎಷ್ಟು; ಕಳೆದ ಮೂರು ವರ್ಷಗಳಲ್ಲಿ ಸ್ಥಳೀಯ ಸಂಸ್ಥೆಗಳಿಂದ (ನಗರಪಾಲಿಕೆ/ಪುರಸಭೆ) ಸಂಗ್ರಹವಾದ' ಭಿಕ್ಷುಕರ ಉಪಕರ' (Beggar Cess) ಮೊತ್ತ ಎಷ್ಟು;

**ಸಮಾಜ ಕಲ್ಯಾಣ ಇಲಾಖೆ**

ರಾಜ್ಯದ ವಿವಿಧ ನಿರಾಶ್ರಿತರ ಪರಿಹಾರ ಕೇಂದ್ರಗಳಲ್ಲಿ ಫೆಬ್ರವರಿ-2026 ರ ಮಾಹೆಯ ಅಂತ್ಯಕ್ಕೆ ಇರುವ ಭಿಕ್ಷುಕರ ಒಟ್ಟು ಸಂಖ್ಯೆ ಈ ಕೆಳಕಂಡಂತೆ ಇದೆ. ವಿವರಗಳನ್ನು **ಅನುಬಂಧ-3,4,5,6**ರಲ್ಲಿ ಒದಗಿಸಿದೆ.

| ಕ್ರ. ಸಂ | ವರ್ಷವಾರು | ಪುರುಷರು | ಮಹಿಳೆಯರು | ಒಟ್ಟು |
|---|---|---|---|---|
| 01 | 2022-23 | 2809 | 399 | 3208 |
| 02 | 2023-24 | 2905 | 473 | 3378 |
| 03 | 2024-25 | 2965 | 555 | 3520 |
| 04 | 2025-2026 **(ಫೆಬ್ರುವರಿಅಂತ್ಯಕ್ಕೆ)** | 3161 | 641 | 3802 |

ಕಳೆದ ಮೂರು ವರ್ಷಗಳಲ್ಲಿ ಸ್ಥಳೀಯ ಸಂಸ್ಥೆಗಳಿಂದ (ನಗರಪಾಲಿಕೆ/ಪುರಸಭೆ)

<table>
<tr>
<td></td>
<td></td>
<td>
ಸಂಗ್ರಹವಾದ' ಭಿಕ್ಷುಕರ ಉಪಕರ'(Beggar Cess) ಮೊತ್ತ ಈ ಕೆಳಕಂಡಂತೆ ಇದೆ.<br>
(ರೂ.ಕೋಟಿಗಳಲ್ಲಿ)
<table>
<tr><th>ಕ್ರ.ಸಂ</th><th>ವರ್ಷ</th><th>ಬಿಬಿಎಂಪಿ</th><th>ನಗರಸಭೆ ,ಪುರಸಭೆ ಪಟ್ಟಣ ಪಂಚಾಯಿತಿ</th><th>ಗ್ರಾಮ ಪಂಚಾಯಿತಿ</th></tr>
<tr><td>01</td><td>2022-23</td><td>65.19</td><td>23.53</td><td>9.95</td></tr>
<tr><td>02</td><td>2023-24</td><td>135.65</td><td>29.14</td><td>9.97</td></tr>
<tr><td>03</td><td>2024-25</td><td>50.00</td><td>34.53</td><td>15.24</td></tr>
<tr><td>04</td><td>2025-2026 (ಫೆಬ್ರುವರಿ ಅಂತ್ಯಕ್ಕೆ)</td><td>33.74</td><td>35.89</td><td>36.96</td></tr>
</table>
</td>
</tr>
<tr>
<td>ಈ</td>
<td>ಸಂಗ್ರಹವಾದ ಭಿಕ್ಷುಕರ ಉಪಕರವನ್ನು ಭಿಕ್ಷುಕರ ಪುನರ್ವಸತಿಗೆ ಮತ್ತು ತೃತೀಯ ಲಿಂಗಿಗಳ ಅಭಿವೃದ್ಧಿಗೆ ಯಾವ ರೀತಿ ಬಳಸಲಾಗುತ್ತಿದೆ; ಈ ನಿಧಿಯು ಸಮರ್ಪಕವಾಗಿ ಬಳಕೆಯಾಗದಿರಲು ಕಾರಣಗಳೇನು?</td>
<td>
ವೈದ್ಯಕೀಯ ಚಿಕಿತ್ಸೆ, ಸಮವಸ್ತ್ರ, ಹಾಸಿಗೆ-ಹೊದಿಕೆ, ಮನರಂಜನೆ, ಅಕ್ಷರ ಕಲಿಕೆ, ಗ್ರಂಥಾಲಯ, ಯೋಗ ಧ್ಯಾನ ಇತ್ಯಾದಿ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಇವರುಗಳು ಕೇಂದ್ರದಿಂದ ಬಿಡುಗಡೆಯಾದ ನಂತರ ಮತ್ತೆ ಭಿಕ್ಷಾಟನಾ ವೃತ್ತಿಗೆ ಮರಳಬಾರದೆಂಬ ಉದ್ದೇಶದಿಂದ ವಿವಿಧ ವೃತ್ತಿಪರ ತರಬೇತಿಗಳಾದ ಹೊಲಿಗೆ, ಕೃಷಿ ಮತ್ತು ತೋಟಗಾರಿಕೆ, ಪಶುಸಂಗೋಪನೆ, ಕುರಿಸಾಕಾಣಿಕೆ, ಹ್ಯಾಂಡ್ ಲೂಮ್, ಮತ್ತು ಪವರ್ ಲೂಮ್, ಕೈಮಗ್ಗ, ಸಿದ್ಧ ಉಡುಪು ತಯಾರಿಕೆ, ತೆಂಗಿನನಾರಿನ ಮ್ಯಾಟ್ ಯಾರಿಕೆ, ಫೆನಾಯಿಲ್, ಸೋಪ್ ಪೌಡರ್, ಬ್ಲಿಚಿಂಗ್ ಪೌಡರ್, ಇತ್ಯಾದಿ ಗೃಹೋಪಯೋಗಿ ವಸ್ತುಗಳ ತಯಾರಿಕೆ ಹಾಗೂ ಫೈಲ್‌ರಾಪರ್, ತರಬೇತಿ, ಹಾಗೂ ಅಡುಗೆ ಸಹಾಯಕರ ತರಬೇತಿ, ಸ್ವಚ್ಛತೆ ತರಬೇತಿಗಳನ್ನು ನೀಡಲಾಗುತ್ತಿದೆ. ತರಬೇತಿ ನಿರತ ನಿರಾಶ್ರಿತರುಗಳಿಗೆ ದಿನವೊಂದಕ್ಕೆ 8 ಗಂಟೆಗಳ ತರಬೇತಿ ಅವದಿಗೆ ರೂ.75/-ಗಳಂತೆ ಹಾಗೂ 8 ಗಂಟೆಗಳ ಅವಧಿಗಿಂತ ಕಡಿಮೆ ಅವದಿತ ರಬೇತಿಗೆ ರೂ.38/-ಗಳಂತೆ ತರಬೇತಿ ಭತ್ಯೆಯನ್ನು ಪಾವತಿಸಲಾಗುತ್ತಿದೆ.<br><br>
ಸಾರ್ವನಿಕರಿಗೆ ಭಿಕ್ಷೆಯನ್ನು ನೀಡುವ ಮೂಲಕ ಭಿಕ್ಷಾಟನೆಯನ್ನು ಪ್ರೋತ್ಸಾಹಿಸದಂತೆ ಅರಿವು ಮೂಡಿಸಲು ವಿವಿಧ ದಿನಪತ್ರಿಕೆಗಳು, ಮಾಸ/ವಾರಪತ್ರಿಕೆಗಳಲ್ಲಿ ಹಾಗೂ ಡಿಜಿಟಲ್ LED ವಾಹನದಲ್ಲಿ , ಡಿಜಿಟಲ್ ವಾಲ್ ಪೇಯಿಟಿಂಗ್ ಮೂಲಕ ಹಾಗೂ ಆಟೋ ಟಾಪ್, ಬಸ್‌ಗಳಲ್ಲಿ ಇತ್ಯಾದಿಗಳ ಮೂಲಕ ಜಾಹಿರಾತು ನೀಡಿ ಅರಿವು ಮೂಡಿಸಲು ಕ್ರಮವಹಿಸಲಾಗಿದೆ. ಹಾಗೂ ಕಾರ್ಯನಿರ್ವಹಿಸುತ್ತಿರುವ ನಿರಾಶ್ರಿತರ ಪರಿಹಾರ ಕೇಂದ್ರಗಳಿಗೆ ಹಾಗೂ ಹೊಸ ನಿರಾಶ್ರಿತರ ಪರಿಹಾರಕೇಂದ್ರಗಳಿಗೆ ಮಂಜೂರಾಗಿರುವ ಜಮೀನಿನಲ್ಲಿ ಕೇಂದ್ರಗಳನ್ನು ಪ್ರಾರಂಭಿಸಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಅಭಿವೃದ್ಧಿ ಕಾಮಗಾರಿಗಳಾದ ಡಾರ್ಮಿಟರಿಗಳು, ಶೌಚಾಲಯಗಳು, ಬಾಬರ್ ಶಾಪ್, ವೈದ್ಯಕೀಯ ಘಟಕ, ತರಬೇತಿ ಘಟಕಗಳು ಜಮೀನಿನ ಭದ್ರತೆಗೆ ಕಾಂಪೌಂಡ್ ಗೋಡೆ ಇತ್ಯಾದಿ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಲಾಗುತ್ತಿದೆ.<br><br>
ಕರ್ನಾಟಕ ಭಿಕ್ಷಾಟನಾ ನಿಷೇಧ ಅಧಿನಿಯಮ ಮತ್ತು ನಿಯಮಗಳಲ್ಲಿ ತೃತೀಯ ಲಿಂಗಿಗಳ ಅಭಿವೃದ್ಧಿಗೆ ಅವಕಾಶ ವಿಲ್ಲದೇ ಇರುವುದರಿಂದ ಭಿಕ್ಷುಕರ ಉಪಕರನ್ನು ಬಳಕೆ ಮಾಡಿರುವುದಿಲ್ಲ.
</td>
</tr>
</table>

ಡಬ್ಲ್ಯೂಸಿಡಿ 30 ಡಬ್ಲ್ಯೂಡಿಸಿ 2026

(ಲಕ್ಷ್ಮೀ ಆರ್. ಹೆಬ್ಬಾಳ್ಕರ್)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರೀಕರ
ಸಬಲೀಕರಣ ಸಚಿವರು

ಅನುಬಂಧ - 1

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬಡತನ ರೇಖೆಗಿಂತ ಕೆಳಗಿರುವ ಲಿಂಗತ್ವ ಅಲ್ಪಸಂಖ್ಯಾತರಿಗೆ ಮಾಸಾಶನ ನೀಡುವ "ಮೈತ್ರಿ" ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ.

ಓದಲಾಗಿದೆ: 1. 2013-14 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಲಿಂಗತ್ವ ಅಲ್ಪಸಂಖ್ಯಾತರಿಗೆ ರೂ.500 ಗಳ ಮಾಸಾಶನದ ಘೋಷಣೆ.

2. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸುತ್ತೋಲೆ ಸಂಖ್ಯೆ: ಮಮಇ 11 ಮಅವಿ 2013 ದಿನಾಂಕ: 29-07-2013

**ಪ್ರಸ್ತಾವನೆ:**

ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಸಂಕಷ್ಟದಲ್ಲಿರುವ ಲಿಂಗತ್ವ ಅಲ್ಪಸಂಖ್ಯಾತರಿಗೆ (ಹಿಜ್ರಾಗಳು, ಕೋಥಿಗಳು, ಜೋಗಪ್ಪಂದಿರು/ಎಫ್‌ಟಿಎಂ/ಎಂಟಿಎಫ್/ಮಂಗಳಮುಖಿಯರು) ಸಹಾಯ ನೀಡುವ ಉದ್ದೇಶದಿಂದ, ಬಡತನ ರೇಖೆಗಿಂತ ಕೆಳಗಿರುವ 40 ರಿಂದ 64 ವರ್ಷದೊಳಗಿರುವ ಲಿಂಗತ್ವ ಅಲ್ಪಸಂಖ್ಯಾತರಿಗೆ ರೂ.500ಗಳ ಮಾಸಾಶನ ನೀಡಲು "ಮೈತ್ರಿ" ಯೋಜನೆಯನ್ನು ಸರ್ಕಾರ 2013-14 ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದೆ. 65ಕ್ಕಿಂತ ಹೆಚ್ಚು ವಯಸ್ಸಾದ ಲಿಂಗತ್ವ ಅಲ್ಪಸಂಖ್ಯಾತರು ಇಂದಿರಾಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ಯೋಜನೆಯಡಿ ಪ್ರಯೋಜನ ಪಡೆಯಬಹುದಾಗಿರುತ್ತದೆ. ಮುಂದುವರೆದು, ಮೇಲೆ ಓದಲಾದ ಉಲ್ಲೇಖ(2) ರನ್ವಯ, ಲಿಂಗತ್ವ ಅಲ್ಪಸಂಖ್ಯಾತರನ್ನು ಗುರುತಿಸುವ ಬಗ್ಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು ಹೊರಡಿಸಿರುವ ಸುತ್ತೋಲೆಯನ್ನು ಆಧರಿಸಿ ಲಿಂಗತ್ವ ಅಲ್ಪಸಂಖ್ಯಾತರನ್ನು ಗುರುತಿಸಲು ಸರ್ಕಾರ ತೀರ್ಮಾನಿಸಿರುವ ಹಿನ್ನಲೆಯಲ್ಲಿ ಕೆಳಕಂಡ ಆದೇಶ;

### ಸರ್ಕಾರದ ಆದೇಶ ಸಂಖ್ಯೆ:-ಆರ್‌ಡಿ 95 ಡಿಎಸ್‌ಪಿ 2013, ಬೆಂಗಳೂರು, ದಿನಾಂಕ:01/08/2013.

ರಾಜ್ಯದಲ್ಲಿನ ಬಡತನ ರೇಖೆಗಿಂತ ಕೆಳಗಿರುವ 40 ರಿಂದ 64 ವರ್ಷದೊಳಗಿರುವ ಲಿಂಗತ್ವ ಅಲ್ಪಸಂಖ್ಯಾತರಿಗೆ(ಹಿಜ್ರಾಗಳು,ಕೋಥಿಗಳು,ಜೋಗಪ್ಪಂದಿರು,/ಎಫ್‌ಟಿಎಂ/ಎಂಟಿಎಫ್/ಮಂಗಳಮುಖಿಯರು)- ಆರ್ಥಿಕ ಸಹಾಯವನ್ನು ಒದಗಿಸಿ ಸಮಾಜದ ಮುಖ್ಯವಾಹಿನಿಗೆ ತರುವ ದೃಷ್ಟಿಯಿಂದ ರೂ.500ಗಳ ಮಾಸಾಶನ ನೀಡಲು "ಮೈತ್ರಿ" ಯೋಜನೆಯನ್ನು ದಿನಾಂಕ:01-08-2013ರಿಂದ ಜಾರಿಗೆ ತಂದು ಆದೇಶಿಸಿದೆ.

1. ಉದ್ದೇಶಿತ ಫಲಾನುಭವಿಯ ಆದಾಯ ಗ್ರಾಮೀಣ ಪ್ರದೇಶಗಳಲ್ಲಿ ರೂ.12,000 ಗಳಿಗಿಂತ ಅಥವಾ ನಗರ ಪ್ರದೇಶಗಳಲ್ಲಿ ರೂ.17,000 ಗಳಿಗಿಂತ ಕಡಿಮೆ ಇರತಕ್ಕದ್ದು.
2. ಉದ್ದೇಶಿತ ಫಲಾನುಭವಿಯು ಲಿಂಗತ್ವ ಅಲ್ಪ ಸಂಖ್ಯಾತರೆಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸುತ್ತೋಲೆ ಸಂಖ್ಯೆ:ಮಮಇ 11 ಮಅವಿ 2013, ದಿನಾಂಕ:29-07-2013ರಂತೆ ಗುರುತಿಸತಕ್ಕದ್ದು. ಅದರಂತೆ ಲಿಂಗತ್ವ ಅಲ್ಪಸಂಖ್ಯಾತರುಗಳನ್ನು ಆರೋಗ್ಯ ಕುಟುಂಬ ಮತ್ತು ಕಲ್ಯಾಣ ಇಲಾಖೆಯಿಂದ ಲಿಂಗತ್ವ ದೃಢೀಕರಣ ಪ್ರಮಾಣ ಪತ್ರವನ್ನು ಪಡೆಯಲು ಇವರುಗಳು ಎದುರಿಸಬಹುದಾದ ತೊಂದರೆಗಳನ್ನು ನಿವಾರಿಸಲು, ಲಿಂಗತ್ವ ಅಲ್ಪ ಸಂಖ್ಯಾತರುಗಳು "ನಿರ್ವಾಣ್" ಆಗಿದ್ದಲ್ಲಿ ಮಾತ್ರ ಲಿಂಗತ್ವವನ್ನು ಗುರುತಿಸಲು ಸಾಧ್ಯವೆಂದು ಹಾಗೂ ವೈದ್ಯರು ಸಹ ಪ್ರಮಾಣ ಪತ್ರ ನೀಡಲು ಸಹಕಾರಿಯಾಗುತ್ತದೆ. ಆದರೆ, "ನಿರ್ವಾಣ್" ಆಗದವರಿಗೆ ವೈದ್ಯಕೀಯ ಪ್ರಮಾಣ ಪತ್ರ ನೀಡಲು ಸಾಧ್ಯವಾಗುತ್ತಿಲ್ಲವೆಂಬುದನ್ನು ಸರ್ಕಾರವು ಮನಗಂಡು, ಲಿಂಗತ್ವ ಅಲ್ಪಸಂಖ್ಯಾತರಲ್ಲರಿಗೂ

ಸಮಾನ ದೃಷ್ಟಿಯಿಂದ ಸರ್ಕಾರದ ಸವಲತ್ತು ದಕ್ಕಿಸುವಂತಾಗಲು ಸಮುದಾಯ ಆಧಾರಿತ ಸಂಸ್ಥೆಗಳಾದ "ಸಂಗಮ" ಮತ್ತು "ಕೆ.ಎಸ್.ಎಂ.ಎಫ್" ಸಂಸ್ಥೆಗಳು ನೋಂದಾಯಿತ ಸದಸ್ಯತ್ವವನ್ನು ಅಫಿಡವಿಟ್ ಮೂಲಕ ಪ್ರಮಾಣೀಕರಿಸಿ ಗುರುತಿಸಿಕೊಳ್ಳತಕ್ಕದ್ದು.

3. ಇತರೇ ಯಾವುದೇ ಸಾಮಾಜಿಕ ಭದ್ರತಾ ಯೋಜನೆಗಳಡಿ ಅಥವಾ ಯಾವುದೇ ತರಹದ ಪಿಂಚಣಿ ಇತ್ಯಾದಿಗಳನ್ನು ಸಾರ್ವಜನಿಕ ಅಥವಾ ಖಾಸಗಿ ಮೂಲಗಳಿಂದ ಪಡೆಯುತ್ತಿರಬಾರದು.
4. ಈ ಮಾಸಾಶನವನ್ನು ಆಯಾ ಹೋಬಳಿಯ ಉಪ ತಹಸೀಲ್ದಾರರು/ತಾಲ್ಲೂಕಿನ ತಹಸೀಲ್ದಾರರು ಅರ್ಹ ಫಲಾನುಭವಿಗಳಿಗೆ ಮಂಜೂರು ಮಾಡುವುದು.
5. ಈ ಮಾಸಾಶನವನ್ನು ಫಲಾನುಭವಿಯ ಬ್ಯಾಂಕ್ ಖಾತೆಗೆ ಅಥವಾ ಅಂಚೆ ಕಚೇರಿಯ ಖಾತೆಗೆ ಖಜಾನೆಯಿಂದ ಪ್ರತಿ ತಿಂಗಳು ವರ್ಗಾಯಿಸಲಾಗುವುದು.
6. ಈ ಯೋಜನೆಗೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ "2235-02-101-0-20" ಅಂಗವಿಕಲ ವೇತನದಡಿ ಒದಗಿಸಲಾದ ಅನುದಾನದಲ್ಲಿ ಭರಿಸತಕ್ಕದ್ದು.
7. ಈ ಯೋಜನೆಯ ಇತರ ಸಂಪೂರ್ಣ ರೂಪುರೇಷೆಗಳು ನಿಗದಿತ ಅರ್ಜಿ ನಮೂನೆ ಹಾಗೂ ಮಂಜೂರಾತಿ ನೀಡುವ ವಿಧಿವಿಧಾನಗಳನ್ನು ಇದಕ್ಕೆ ಲಗತ್ತಿಸಿದ ಅನುಬಂಧದಲ್ಲಿ ನೀಡಲಾಗಿದೆ.

---

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಲಕ್ಷ್ಮೀ ಜಿ ಕೃಷ್ಣರಾವ್)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಕಂದಾಯ ಇಲಾಖೆ

ಇವರಿಗೆ: ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು; ಇವರಿಗೆ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿ 500 ಪ್ರತಿಗಳನ್ನು ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯಕ್ಕೆ ಕಳುಹಿಸಬೇಕೆಂದು ಕೋರಿದೆ.

ಪ್ರತಿಯನ್ನು:

1. ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಲೆಕ್ಕ ತಪಾಸಣೆ)(ಎ ಮತ್ತು ಇ) ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯದರ್ಶಿಗಳವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3. ಮಾನ್ಯ ಮುಖ್ಯ ಮಂತ್ರಿಗಳವರ ಪ್ರಧಾನ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
5. ವಿಭಾಗೀಯ ವ್ಯವಸ್ಥಾಪಕರು, ಭಾರತೀಯ ಜೀವ ವಿಮಾ ನಿಗಮ, ಪಿ.ಜಿ.ಎಸ್ ಯುನಿಟ್, 4ನೇ ಮಹಡಿ, ಜೆ.ಸಿ. ರೋಡ್, ಬೆಂಗಳೂರು-02.
6. ಪ್ರಾದೇಶಿಕ ಆಯುಕ್ತರು, ಬೆಂಗಳೂರು/ಬೆಳಗಾವಿ/ಮೈಸೂರು/ಗುಲ್ಬರ್ಗಾ.
7. ಎಲ್ಲಾ ಜಿಲ್ಲಾಧಿಕಾರಿಗಳು.
8. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ಬೆಂಗಳೂರು.
9. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
10. ಸಂಬಂಧಪಟ್ಟ ಉಪ ವಿಭಾಗಾಧಿಕಾರಿಗಳು/ತಹಸೀಲ್ದಾರರುಗಳಿಗೆ.
11. ಎಲ್ಲಾ ಜಿಲ್ಲಾ ಖಜಾನೆ ಹಾಗೂ ಉಪ ಖಜಾನೆ ಅಧಿಕಾರಿಗಳು.
12. ಹೆಚ್ಚುವರಿ ಪ್ರತಿ ಮತ್ತು ರಕ್ಷಾ ಕಡತ.

ಅನುಬಂಧ - ೨

| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶಿವಕುಮಾರ್ ಕೆ. (ನಾಮನಿರ್ದೇಶಿತರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1118(1259)ಕ್ಕೆ ಅನುಬಂಧ(ಜನವರಿ 2026ರ ಅಂತ್ಯಕ್ಕೆ) | | |
|---|---|---|
| **SL.NO** | **DISTRICT** | **COUNT** |
| 1 | Bagalkot | 158 |
| 2 | Ballari | 208 |
| 3 | Bangalore Rural | 46 |
| 4 | Belagavi | 207 |
| 5 | Bengaluru | 371 |
| 6 | Bengaluru South | 49 |
| 7 | Bidar | 56 |
| 8 | Chamarajanagar | 96 |
| 9 | Chikballapur | 92 |
| 10 | Chikkamagaluru | 18 |
| 11 | Chitradurga | 48 |
| 12 | Dakshina Kannada | 20 |
| 13 | Davanagere | 59 |
| 14 | Dharwad | 52 |
| 15 | Gadag | 29 |
| 16 | Hassan | 6 |
| 17 | Haveri | 38 |
| 18 | Kalaburagi | 170 |
| 19 | Kolar | 72 |
| 20 | Koppal | 69 |
| 21 | Mandya | 32 |
| 22 | Mysuru | 96 |
| 23 | Raichur | 95 |
| 24 | Shivamogga | 26 |
| 25 | Tumakuru | 117 |
| 26 | Udupi | 45 |
| 27 | Uttara Kannada | 4 |
| 28 | Vijayanagar | 124 |
| 29 | Vijayapura | 227 |
| 30 | Yadgir | 104 |
| **TOTAL** | | **2734** |

ಅನುಬಂಧ - ಅ-3

ಕೇಂದ್ರ ಪರಿಹಾರ ಸಮಿತಿಯ ಅಧೀನ ವ್ಯಾಪ್ತಿಗೊಳಪಡುವ 14 ನಿರಾಶ್ರಿತರ ಪರಿಹಾರ ಕೇಂದ್ರಗಳಲ್ಲಿ 2022-23 ನೇ ಸಾಲಿನಲ್ಲಿ ರವರೆಗೆ ಬಂಧಿಸಲಾದ/ಬಿಡುಗಡೆ ಮಾಡಲಾದ ಮತ್ತು ರಕ್ಷಣೆ ನೀಡಲಾದ ನಿರಾಶ್ರಿತರ ವಿವರಗಳ ಪಟ್ಟಿ

| ಕ್ರ.ಸಂ | ನಿರಾಶ್ರಿತರ ಪರಿಹಾರ ಕೇಂದ್ರಗಳು | 01-04-2022 ಆರಂಭದಲ್ಲಿ ಇದ್ದ ಆರಂಭಿಕ ನಿರಾಶ್ರಿತರ ಸಂಖ್ಯೆ | | | ದಿ:01.04.2022 ರಿಂದ 31.03.2023 ರವರೆಗೆ ಬಂಧಿಸಲಾದ ನಿರಾಶ್ರಿತರ ಸಂಖ್ಯೆ | | | ದಿ:01.04.2022 ರಿಂದ 31.03.2023 ರವರೆಗೆ ಒಟ್ಟು ನಿರಾಶ್ರಿತರ ಸಂಖ್ಯೆ | | | ದಿ:01.04.2022 ರಿಂದ 31.03.2023 ರವರೆಗೆ ಬಿಡುಗಡೆಯಾದ ನಿರಾಶ್ರಿತರ ಸಂಖ್ಯೆ | | | ಮರಣ ಹೊಂದಿದ ನಿರಾಶ್ರಿತರ ಸಂಖ್ಯೆ | | | ದಿ 31.03.2023 ರ ಅಂತ್ಯಕ್ಕೆ ಇದ್ದ ನಿರಾಶ್ರಿತ ಸಂಖ್ಯೆ | | |
|---|---|---|---|---|---|---|---|---|---|---|---|---|---|---|---|---|---|---|---|
| | | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು |
| 1 | ಬೆಂಗಳೂರು | 496 | 149 | 645 | 979 | 319 | 1298 | 1475 | 468 | 1943 | 861 | 338 | 1199 | 14 | 8 | 22 | 600 | 122 | 722 |
| 2 | ವಿಜಾಪುರ | 84 | 21 | 105 | 359 | 188 | 547 | 443 | 209 | 652 | 345 | 184 | 529 | 8 | 2 | 10 | 90 | 23 | 113 |
| 3 | ಬಳ್ಳಾರಿ | 132 | 42 | 174 | 96 | 39 | 135 | 228 | 81 | 309 | 120 | 29 | 149 | 14 | 5 | 19 | 94 | 47 | 141 |
| 4 | ಬೆಳಗಾವಿ | 103 | 0 | 103 | 96 | 8 | 104 | 199 | 8 | 207 | 78 | 2 | 80 | 2 | 0 | 2 | 119 | 6 | 125 |
| 5 | ಚಿತ್ರದುರ್ಗ | 235 | 74 | 309 | 227 | 80 | 307 | 462 | 154 | 616 | 111 | 61 | 172 | 5 | 8 | 13 | 346 | 85 | 431 |
| 6 | ದಾವಣಗೆರೆ | 137 | 1 | 138 | 305 | 9 | 314 | 442 | 10 | 452 | 262 | 7 | 269 | 2 | 0 | 2 | 178 | 3 | 181 |
| 7 | ಗುಲ್ಬರ್ಗಾ | 166 | 1 | 167 | 85 | 5 | 90 | 251 | 6 | 257 | 147 | 5 | 152 | 1 | 0 | 1 | 103 | 1 | 104 |
| 8 | ಹುಬ್ಬಳ್ಳಿ-ಧಾರವಾಡ | 77 | 65 | 142 | 72 | 32 | 104 | 149 | 97 | 246 | 80 | 31 | 111 | 1 | 0 | 1 | 68 | 66 | 134 |
| 9 | ಕೋಲಾರ | 84 | 2 | 86 | 185 | 0 | 185 | 269 | 2 | 271 | 163 | 2 | 165 | 0 | 0 | 0 | 106 | 0 | 106 |
| 10 | ಮೈಸೂರು | 287 | 0 | 287 | 867 | 0 | 867 | 1154 | 0 | 1154 | 721 | 0 | 721 | 7 | 0 | 7 | 426 | 0 | 426 |
| 11 | ದಕ್ಷಿಣ ಕನ್ನಡ | 51 | 5 | 56 | 240 | 15 | 255 | 291 | 20 | 311 | 125 | 15 | 140 | 0 | 0 | 0 | 166 | 5 | 171 |
| 12 | ರಾಯಚೂರು | 100 | 0 | 100 | 143 | 0 | 143 | 243 | 0 | 243 | 141 | 0 | 141 | 2 | 0 | 2 | 100 | 0 | 100 |
| 13 | ಶಿವಮೊಗ್ಗ | 189 | 0 | 189 | 146 | 0 | 146 | 335 | 0 | 335 | 127 | 0 | 127 | 3 | 0 | 3 | 205 | 0 | 205 |
| 14 | ತುಮಕೂರು | 169 | 1 | 170 | 331 | 124 | 455 | 500 | 125 | 625 | 285 | 84 | 369 | 7 | 0 | 7 | 208 | 41 | 249 |
| | ಒಟ್ಟು | 2310 | 361 | 2671 | 4131 | 819 | 4950 | 6441 | 1180 | 7621 | 3566 | 758 | 4324 | 66 | 23 | 89 | 2809 | 399 | 3208 |

ಅನುಬಂಧ : ೪-4

ಕೇಂದ್ರ ಪರಿಹಾರ ಸಮಿತಿಯ ಆಡಳಿತ ವ್ಯಾಪ್ತಿಗೊಳಪಡುವ 14 ನಿರಾಶ್ರಿತರ ಪರಿಹಾರ ಕೇಂದ್ರಗಳಲ್ಲಿ 2023-24 ನೇ ಸಾಲಿನಲ್ಲಿ ರವರೆಗೆ ಬಂಧಿಸಲಾದ/ಬಿಡುಗಡೆ ಮಾಡಲಾದ ಮತ್ತು ರಕ್ಷಣೆ ನೀಡಲಾದ ನಿರಾಶ್ರಿತರ ವಿವರಗಳ ಪಟ್ಟಿ

| ಕ್ರ.ಸಂ | ನಿರಾಶ್ರಿತರ ಪರಿಹಾರ ಕೇಂದ್ರಗಳು | 01-04-2023 ಪ್ರಾರಂಭದಂದು ಇದ್ದ ಆರಂಭಿಕ ನಿರಾಶ್ರಿತರ ಸಂಖ್ಯೆ | | | ದಿ:01.04.2023 ರಿಂದ 31.03.2024 ರವರೆಗೆ ಬಂಧಿಸಲಾದ ನಿರಾಶ್ರಿತರ ಸಂಖ್ಯೆ | | | ದಿ:01.04.2023 ರಿಂದ 31.03.2024 ರವರೆಗೆ ಒಟ್ಟು ನಿರಾಶ್ರಿತರ ಸಂಖ್ಯೆ | | | ದಿ:01.04.2023 ರಿಂದ 31.03.2024 ರವರೆಗೆ ಬಿಡುಗಡೆಯಾದ ನಿರಾಶ್ರಿತರ ಸಂಖ್ಯೆ | | | ಮರಣ ಹೊಂದಿದ ನಿರಾಶ್ರಿತರ ಸಂಖ್ಯೆ | | | ದಿ.31.03.2024 ರ ಅಂತ್ಯಕ್ಕೆ ಇದ್ದ ನಿರಾಶ್ರಿತರ ಸಂಖ್ಯೆ | | |
|---|---|---|---|---|---|---|---|---|---|---|---|---|---|---|---|---|---|---|---|
| | | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು |
| 1 | ಬೆಂಗಳೂರು | 600 | 122 | 722 | 1096 | 342 | 1438 | 1696 | 464 | 2160 | 1005 | 322 | 1327 | 19 | 0 | 19 | 672 | 142 | 814 |
| 2 | ವಿಜಯಪುರ | 90 | 23 | 113 | 405 | 206 | 611 | 495 | 229 | 724 | 362 | 195 | 557 | 0 | 1 | 1 | 133 | 33 | 166 |
| 3 | ಬಳ್ಳಾರಿ | 94 | 47 | 141 | 182 | 51 | 233 | 276 | 98 | 374 | 151 | 56 | 207 | 3 | 4 | 7 | 122 | 38 | 160 |
| 4 | ಬೆಳಗಾವಿ | 119 | 6 | 125 | 129 | 39 | 168 | 248 | 45 | 293 | 138 | 23 | 161 | 2 | 0 | 2 | 108 | 22 | 130 |
| 5 | ಚಿತ್ರದುರ್ಗ | 346 | 85 | 431 | 113 | 45 | 158 | 459 | 130 | 589 | 113 | 51 | 164 | 4 | 0 | 4 | 342 | 79 | 421 |
| 6 | ದಾವಣಗೆರೆ | 178 | 3 | 181 | 216 | 4 | 220 | 394 | 7 | 401 | 221 | 7 | 228 | 8 | 0 | 8 | 165 | 0 | 165 |
| 7 | ಗುಲ್ಬರ್ಗಾ | 103 | 1 | 104 | 22 | 13 | 35 | 125 | 14 | 139 | 35 | 13 | 48 | 0 | 0 | 0 | 90 | 1 | 91 |
| 8 | ಹುಬ್ಬಳ್ಳಿ-ಧಾರವಾಡ | 68 | 66 | 134 | 112 | 74 | 186 | 180 | 140 | 320 | 111 | 87 | 198 | 3 | 2 | 5 | 66 | 51 | 117 |
| 9 | ಕೋಲಾರ | 106 | 0 | 106 | 160 | 61 | 221 | 266 | 61 | 327 | 166 | 32 | 198 | 0 | 0 | 0 | 100 | 29 | 129 |
| 10 | ಮೈಸೂರು | 426 | 0 | 426 | 607 | 55 | 662 | 1033 | 55 | 1088 | 631 | 33 | 664 | 2 | 0 | 2 | 400 | 22 | 422 |
| 11 | ದಕ್ಷಿಣ ಕನ್ನಡ | 166 | 5 | 171 | 251 | 24 | 275 | 417 | 29 | 446 | 253 | 26 | 279 | 2 | 0 | 2 | 162 | 3 | 165 |
| 12 | ರಾಯಚೂರು | 100 | 0 | 100 | 141 | 0 | 141 | 241 | 0 | 241 | 82 | 0 | 82 | 4 | 0 | 4 | 155 | 0 | 155 |
| 13 | ಶಿವಮೊಗ್ಗ | 205 | 0 | 205 | 151 | 0 | 151 | 356 | 0 | 356 | 173 | 0 | 173 | 3 | 0 | 3 | 180 | 0 | 180 |
| 14 | ತುಮಕೂರು | 208 | 41 | 249 | 252 | 95 | 347 | 460 | 136 | 596 | 246 | 83 | 329 | 4 | 0 | 4 | 210 | 53 | 263 |
| | ಒಟ್ಟು | 2809 | 399 | 3208 | 3837 | 1009 | 4846 | 6646 | 1408 | 8054 | 3687 | 928 | 4615 | 54 | 7 | 61 | 2905 | 473 | 3378 |

ಅನುಬಂಧ - ಅ-5

ಕೇಂದ್ರ ಪರಿಹಾರ ಸಮಿತಿಯ ಅಧೀನ ವ್ಯಾಪ್ತಿಗೊಳಪಡುವ 14 ನಿರಾಶ್ರಿತರ ಪರಿಹಾರ ಕೇಂದ್ರಗಳಲ್ಲಿ 2024-25 ನೇ ಸಾಲಿನಲ್ಲಿ ರವರೆಗೆ ಬಂಧಿಸಲಾದ/ಬಿಡುಗಡೆ ಮಾಡಲಾದ ಮತ್ತು ರಕ್ಷಣೆ ನೀಡಲಾದ ನಿರಾಶ್ರಿತರ ವಿವರಣಾ ಪಟ್ಟಿ

| ಕ್ರ.ಸಂ | ನಿರಾಶ್ರಿತರ ಪರಿಹಾರ ಕೇಂದ್ರಗಳು | 01-04-2024 ಆರಂಭದಂದು ಇದ್ದ ಆರಂಭಿಕ ನಿರಾಶ್ರಿತರ ಸಂಖ್ಯೆ | | | ದಿ:01.04.2024 ರಿಂದ 31.03.2025 ರವರೆಗೆ ಬಂಧಿಸಲಾದ ನಿರಾಶ್ರಿತರ ಸಂಖ್ಯೆ | | | ದಿ:01.04.2024 ರಿಂದ 31.03..2025 ರವರೆಗೆ ಒಟ್ಟು ನಿರಾಶ್ರಿತರ ಸಂಖ್ಯೆ | | | ದಿ:01.04.2024 ರಿಂದ 31.03.2025 ರವರೆಗೆ ಬಿಡುಗಡೆಯಾದ ನಿರಾಶ್ರಿತರ ಸಂಖ್ಯೆ | | | ಮರಣ ಹೊಂದಿದ ನಿರಾಶ್ರಿತರ ಸಂಖ್ಯೆ | | | ದಿ.31.03.2025 ರ ಅಂತ್ಯಕ್ಕೆ ಇದ್ದ ನಿರಾಶ್ರಿತ ಸಂಖ್ಯೆ | | |
|---|---|---|---|---|---|---|---|---|---|---|---|---|---|---|---|---|---|---|---|
| | | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು |
| 1 | ಬೆಂಗಳೂರು | 672 | 142 | 814 | 1057 | 408 | 1465 | 1729 | 550 | 2279 | 975 | 367 | 1342 | 34 | 3 | 37 | 720 | 180 | 900 |
| 2 | ವಿಜಯಪುರ | 133 | 33 | 166 | 961 | 186 | 1147 | 1094 | 219 | 1313 | 942 | 184 | 1126 | 2 | 2 | 4 | 150 | 33 | 183 |
| 3 | ಬಳ್ಳಾರಿ | 122 | 38 | 160 | 194 | 50 | 244 | 316 | 88 | 404 | 188 | 57 | 245 | 1 | 0 | 1 | 127 | 31 | 158 |
| 4 | ಬೆಳಗಾವಿ | 108 | 22 | 130 | 36 | 20 | 56 | 144 | 42 | 186 | 49 | 12 | 61 | 2 | 0 | 2 | 93 | 30 | 123 |
| 5 | ಚಿತ್ರದುರ್ಗ | 342 | 79 | 421 | 94 | 31 | 125 | 436 | 110 | 546 | 130 | 36 | 166 | 1 | 2 | 3 | 305 | 72 | 377 |
| 6 | ದಾವಣಗೆರೆ | 165 | 0 | 165 | 187 | 0 | 187 | 352 | 0 | 352 | 202 | 0 | 202 | 2 | 0 | 2 | 148 | 0 | 148 |
| 7 | ಗುಲ್ಬರ್ಗ | 90 | 1 | 91 | 133 | 0 | 133 | 223 | 1 | 224 | 86 | 1 | 87 | 0 | 0 | 0 | 137 | 0 | 137 |
| 8 | ಹುಬ್ಬಳ್ಳಿ-ಧಾರವಾಡ | 66 | 51 | 117 | 75 | 42 | 117 | 141 | 93 | 234 | 77 | 46 | 123 | 0 | 1 | 1 | 64 | 46 | 110 |
| 9 | ಕೋಲಾರ | 100 | 29 | 129 | 174 | 86 | 260 | 274 | 115 | 389 | 147 | 80 | 227 | 0 | 0 | 0 | 127 | 35 | 162 |
| 10 | ಮೈಸೂರು | 400 | 22 | 422 | 585 | 207 | 792 | 985 | 229 | 1214 | 589 | 180 | 769 | 3 | 0 | 3 | 393 | 49 | 442 |
| 11 | ದಕ್ಷಿಣ ಕನ್ನಡ | 162 | 3 | 165 | 217 | 13 | 230 | 379 | 16 | 395 | 239 | 14 | 253 | 3 | 0 | 3 | 137 | 2 | 139 |
| 12 | ರಾಯಚೂರು | 155 | 0 | 155 | 112 | 0 | 112 | 267 | 0 | 267 | 131 | 0 | 131 | 4 | 0 | 4 | 132 | 0 | 132 |
| 13 | ಶಿವಮೊಗ್ಗ | 180 | 0 | 180 | 247 | 0 | 247 | 427 | 0 | 427 | 235 | 0 | 235 | 8 | 0 | 8 | 184 | 0 | 184 |
| 14 | ತುಮಕೂರು | 210 | 53 | 263 | 364 | 106 | 470 | 574 | 159 | 733 | 318 | 80 | 398 | 8 | 2 | 10 | 248 | 77 | 325 |
| | ಒಟ್ಟು | 2905 | 473 | 3378 | 4436 | 1149 | 5585 | 7341 | 1622 | 8963 | 4308 | 1057 | 5365 | 68 | 10 | 78 | 2965 | 555 | 3520 |

ಅನುಬಂಧ : ೪.೬

**ಕೇಂದ್ರ ಪರಿಹಾರ ಸಮಿತಿಯ ಆಡಳಿತ ವ್ಯಾಪ್ತಿಗೊಳಪಡುವ 15 ನಿರಾಶ್ರಿತರ ಪರಿಹಾರ ಕೇಂದ್ರಗಳಲ್ಲಿ 2025-26 ನೇ ಸಾಲಿನಲ್ಲಿ ರವರೆಗೆ ಬಂಧಿಸಲಾದ /ಬಿಡುಗಡೆ ಮಾಡಲಾದ ಮತ್ತು ರಕ್ಷಣೆ ನೀಡಲಾದ ನಿರಾಶ್ರಿತರ ವಿವರಣಾ ಪಟ್ಟಿ**

| ಕ್ರ.ಸಂ | ನಿರಾಶ್ರಿತರ ಪರಿಹಾರ ಕೇಂದ್ರಗಳು | 01-04-2025 ಹಾರೀಖಿನಿಂದ ಇದ್ದ ನಿರಾಶ್ರಿತರ ಸಂಖ್ಯೆ | | | ದಿ:01-04-2025 ರಿಂದ 28-02-2026 ರವರೆಗೆ ಬಂಧಿಸಲಾದ ನಿರಾಶ್ರಿತರ ಸಂಖ್ಯೆ | | | ದಿ:01-04-2025 ರಿಂದ 28-02-2026 ರವರೆಗೆ ಒಟ್ಟು ನಿರಾಶ್ರಿತರ ಸಂಖ್ಯೆ | | | ದಿ 01-04-2025 ರಿಂದ 28-02-2026 ರವರೆಗೆ ಬಿಡುಗಡೆ ಮಾಡಲಾದ ನಿರಾಶ್ರಿತರ ಸಂಖ್ಯೆ | | | ಮರಣ ಹೊಂದಿದ ನಿರಾಶ್ರಿತರ ಸಂಖ್ಯೆ | | | ದಿ:28-02-2026 ರ ಅಂತ್ಯಕ್ಕೆ ಇದ್ದ ನಿರಾಶ್ರಿತರ ಸಂಖ್ಯೆ | | |
|---|---|---|---|---|---|---|---|---|---|---|---|---|---|---|---|---|---|---|---|
| | | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು |
| 1 | ಬೆಂಗಳೂರು | 720 | 180 | 900 | 919 | 379 | 1298 | 1639 | 559 | 2198 | 927 | 370 | 1297 | 27 | 8 | 35 | 685 | 181 | 866 |
| 2 | ಬೆಂಗಳೂರು ಪೂರ್ವ | 19 | 16 | 35 | 46 | 51 | 97 | 65 | 67 | 132 | 38 | 54 | 92 | 0 | 2 | 2 | 27 | 11 | 38 |
| 3 | ವಿಜಾಪುರ | 150 | 33 | 183 | 539 | 123 | 662 | 689 | 156 | 845 | 569 | 116 | 685 | 2 | 0 | 2 | 118 | 40 | 158 |
| 4 | ಬಳ್ಳಾರಿ | 127 | 31 | 158 | 249 | 63 | 312 | 376 | 94 | 470 | 230 | 50 | 280 | 0 | 0 | 0 | 146 | 44 | 190 |
| 5 | ಬೆಳಗಾವಿ | 93 | 30 | 123 | 75 | 19 | 94 | 168 | 49 | 217 | 62 | 18 | 80 | 3 | 2 | 5 | 103 | 29 | 132 |
| 6 | ಚಿತ್ರದುರ್ಗ | 305 | 72 | 377 | 118 | 47 | 165 | 423 | 119 | 542 | 89 | 28 | 117 | 0 | 2 | 2 | 334 | 89 | 423 |
| 7 | ದಾವಣಗೆರೆ | 148 | 0 | 148 | 208 | 0 | 208 | 356 | 0 | 356 | 203 | 0 | 203 | 1 | 0 | 1 | 152 | 0 | 152 |
| 8 | ಗುಲ್ಬರ್ಗಾ | 137 | 0 | 137 | 229 | 0 | 229 | 366 | 0 | 366 | 202 | 0 | 202 | 0 | 0 | 0 | 164 | 0 | 164 |
| 9 | ಹುಬ್ಬಳ್ಳಿ-ಧಾರವಾಡ | 64 | 46 | 110 | 187 | 66 | 253 | 251 | 112 | 363 | 153 | 66 | 219 | 2 | 2 | 4 | 96 | 44 | 140 |
| 10 | ಕೋಲಾರ | 127 | 35 | 162 | 178 | 69 | 247 | 305 | 104 | 409 | 164 | 67 | 231 | 0 | 1 | 1 | 141 | 36 | 177 |
| 11 | ಮೈಸೂರು | 393 | 49 | 442 | 508 | 101 | 609 | 901 | 150 | 1051 | 542 | 116 | 658 | 2 | 2 | 4 | 357 | 32 | 389 |
| 12 | ದಕ್ಷಿಣ ಕನ್ನಡ | 137 | 2 | 139 | 335 | 11 | 346 | 472 | 13 | 485 | 289 | 12 | 301 | 1 | 0 | 1 | 182 | 1 | 183 |
| 13 | ರಾಯಚೂರು | 132 | 0 | 132 | 167 | 46 | 213 | 299 | 46 | 345 | 135 | 18 | 153 | 3 | 0 | 3 | 161 | 28 | 189 |
| 14 | ಶಿವಮೊಗ್ಗ | 184 | 0 | 184 | 365 | 69 | 434 | 549 | 69 | 618 | 314 | 33 | 347 | 3 | 0 | 3 | 232 | 36 | 268 |
| 15 | ತುಮಕೂರು | 248 | 77 | 325 | 371 | 111 | 482 | 619 | 188 | 807 | 350 | 111 | 461 | 6 | 7 | 13 | 263 | 70 | 333 |
| | ಒಟ್ಟು | 2984 | 571 | 3555 | 4494 | 1155 | 5649 | 7478 | 1726 | 9204 | 4267 | 1059 | 5326 | 50 | 26 | 76 | 3161 | 641 | 3802 |